# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 108 | Pages. 2 | Date: 31-03-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 108 - ಪುಟಗಳು : 2 | 31-03-2026 | ಮಂಗಳವಾರ | Ph: 8762954248 | ದರ : ₹1


# ಇಂದಿನಿಂದ ಬೇಲೂರು ಚನ್ನಕೇಶವ ರಥೋತ್ಸವ

## ಇಂದು ಬ್ರಹ್ಮ ನಾಳೆ ನಾಡ ರಥೋತ್ಸವ | ಸಿದ್ಧತೆ ಪರಿಶೀಲಿಸಿದ ಶಾಸಕ ಸುರೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಐತಿಹಾಸಿಕ ಚನ್ನಕೇಶವ ಸ್ವಾಮಿ ಬ್ರಹ್ಮ ಹಾಗು ನಾಡ ರಥೋತ್ಸವ ಮಾ. 31, ಏ. 1ರಂದು ನಡೆಯಲಿದ್ದು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಶಾಸಕ ಹೆಚ್. ಕೆ.ಸುರೇಶ್ ಹೇಳಿದರು.

ಜಾತ್ರಾ ಮಹೋತ್ಸವ ಹಿನ್ನಲೆಯಲ್ಲಿ ಸೋಮವಾರ ಅಧಿಕಾರಿಗಳೊಂದಿಗೆ ಕಲ್ಯಾಣಿಯಿಂದ ದೇಗಲದ ವರೆಗೆ ಪರಿಶೀಲಿಸಿ ಮಾತನಾಡಿದ ಅವರು, ಬೇಲೂರು ಶ್ರೀ ಚನ್ನಕೇಶವ ಬ್ರಹ್ಮ ರಥೋತ್ಸ ವ ಹಾಗು ನಾಡ ರಥೋತ್ಸವದಲ್ಲಿ ಯಾವುದೇ ತೊಂದರಯಾಗದಂತೆ ವ್ಯವಸ್ಥೆ ಮಾಡಬೇಕು. ಕಲ್ಯಾಣಿ, ಶೌಚಾಲಯ, ಪಾರ್ಕಿಂಗ್ ವ್ಯವಸ್ಥೆ ಹಾಗೂ ದೇವಸ್ಥಾನ ಸುತ್ತಮುತ್ತ ಸ್ವಚ್ಛತೆ, ಕುಡಿಯುವ ನೀರಿನ



ವ್ಯವಸ್ಥೆ ಸೇರಿ ದೇಗುಲದ ಒಳಭಾಗದಲ್ಲಿ ನೆಲಹಾಸು ಸೇರಿದಂತೆ ಎಲ್ಲಿಯೂ ಲೋಪವಾಗದಂತೆ ಎಚ್ಚರಿಕೆ ವಹಿಸಿ ಎಂದು ಅಧಿಕಾರಿಗಳಿಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 909 ವರ್ಷಗಳ ಇತಿಹಾಸ ಇರುವ ಈ ನಮ್ಮ ದೇವಾಲಯಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಅವರಿಗೆ ಕಿಂಚಿತ್ತೂ ಲೋಪವಾಗದಂತೆ ಕ್ರಮ ಕೈಗೊಳ್ಳುವುದು ಅಧಿಕಾರಿಗಳ ಕರ್ತವ್ಯ. ಜಾತ್ರೆ, ಸಂದರ್ಭದಲ್ಲಿ ಯಾವುದೇ ರೀತಿಯ ಲೋಪದೋಷಗಳಾದರೆ ಅಧಿಕಾರಿಗಳೇ ನೇರ ಹೊಣೆ. ಕುಡಿಯುವ ನೀರು, ಕಲ್ಯಾಣಿ ಸುತ್ತಮುತ್ತ ಹಾಗೂ ಶೌಚಾಲಯ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಿದ್ದು ಸಿಸಿ ಕ್ಯಾಮರಾ ಹಾಗೂ ವಿದ್ಯುತ್ ಅನ್ನು ನಾಲ್ಕು ಭಾಗಗಳಲ್ಲಿ ಅಳವಡಿಸಲಾಗಿದೆ. ಪಾರ್ಕಿಂಗ್ ವ್ಯವಸ್ಥೆಯಲ್ಲಿ ಈಗಾಗಲೇ ಉತ್ತಮವಾಗಿ ನಿರ್ವಹಿಸುತ್ತಿದ್ದು ಸ್ಥಳೀಯರ ಸಹಕಾರ ಅತಿ ಮುಖ್ಯ. ರಥೋತ್ಸವ ಸಂದರ್ಭಗಳಲ್ಲಿ ಯಾವುದೆ ವಾಹನಗಳನ್ನು ದೇವಾಲಯದ ಬಳಿ ಬಿಡದಂತೆ ಸೂಚಿಸಿದರು.

ಶಿಷ್ಟಾಚಾರ ಯಾವುದೇ ಕಾರಣಕ್ಕು ಉಲ್ಲಂಘನೆ ಮಾಡಬಾರದು. ಒಂದು ವೇಳೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದರೆ ಅಂತವರ ವಿರುದ್ಧ ಸದನದಲ್ಲಿ ಹಕ್ಕುಚ್ಯುತಿ ಮಂಡಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಪುರಸಭೆ ಪ್ರಭಾರ ಅಧ್ಯಕ್ಷೆ ಉಷಾ ಸತೀಶ್, ಮಾಜಿ ಅಧ್ಯಕ್ಷ ಹಾಗೂ ಸದಸ್ಯ ಅಶೋಕ್, ಉಪವಿಭಾಗಧಿಕಾರಿ ಮಂಜುನಾಥ್, ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ, ಕಾರ್ಯನಿರ್ವಹಣಾಧಿಕಾರಿ ಯೊಗೇಶ್, ಸಿಪಿಐ ರೇವಣ್ಣ, ಮುಖ್ಯಾಧಿಕಾರಿ ಬಸವರಾಜು ಟಾಕಪ್ಪ ಶಿಗ್ಗಾವಿ, ತಾಲೂಕು ಆರೋಗ್ಯಾಧಿಕಾರಿ ಲೊಹಿತ್, ನೀರು ಸರಬರಾಜು ಸಿಬ್ಬಂದಿ ಬಿ.ಆರ್. ಕುಮಾರ್, ವಲಯ ಅರಣ್ಯಾಧಿಕಾರಿ ಯತೀಶ್ ಇತರರು ಇದ್ದರು.

### ಕ್ಷಮೆಯಾಚಿಸಿದ ಶಾಸಕ ಸುರೇಶ್

ಕಳೆದ ವರ್ಷ ನನಗೆ ತಿಳಿಯದೆ ನಾನು ರಥದಲ್ಲಿ ತೆರಳಿದ್ದೆ. ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದ್ದು ಅದರ ಪಶ್ಚಾತಾಪ ಏನೆಂಬುದು ಅರ್ಥವಾಗಿದೆ. ನಾನು ಭಗವಂತನಲ್ಲಿ ಕ್ಷಮೆಯಾಚಿಸಿದ್ದೇನೆ. ಅಲ್ಲದೆ ನಾನು ಇಂದು ಬಹಿರಂಗವಾಗಿ ತಾಲ್ಲೂಕಿನ ಜನರಲ್ಲಿ ಮತ್ತು ದೇವರಲ್ಲಿ ಕ್ಷಮೆ ಕೇಳುತ್ತಿದ್ದು ಇದು ಭಗವಂತನ ರಥೋತ್ಸವ ಹೊರತು ಜನತೆಯ ಉತ್ಸವ ಅಲ್ಲ. ಇದನ್ನು ಪ್ರತಿಯೊಬ್ಬರು ಅರಿಯಬೇಕು ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

## ಸಿಲಿಂಡರ್ ಸೋರಿಕೆಯಿಂದ ಸ್ಫೋಟ: ನಾಲ್ವರಿಗೆ ಗಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಖಾಲಿಯಾದ ಗ್ಯಾಸ್ ಸಿಲಿಂಡರ್ ಬದಲಾಯಿಸುವ ವೇಳೆ ಅನಿಲ ಸೋರಿಕೆಯಿಂದ ಸ್ಪೋಟ ಸಂಭವಿಸಿ ಮನೆಯಲ್ಲಿದ್ದ ನಾಲ್ವರು ಗಾಯಗೊಂಡ ಘಟನೆ ಸೋಮವಾರ ನಡೆದಿದೆ.

ತಾಲ್ಲೂಕಿನ ಕೊಣನೂರು ಹೋಬಳಿಯ ಕೆ. ಅಬ್ಬೂರು ಗ್ರಾಮದಲ್ಲಿರುವ ಸುಂದರೇಶ್ ಅವರ ಮನೆಯಲ್ಲಿ ಅವಘಡ ಸಂಭವಿಸಿದೆ. ಖಾಲಿಯಾದ ಸಿಲಿಂಡರ್ ಬದಲಿಗೆ ಹೊಸ ಸಿಲಿಂಡರ್ ಅಳವಡಿಸುತ್ತಿದ್ದಾಗ ಏಕಾಏಕಿ ಸೋರಿಕೆಯಾಗಿ ಸ್ಫೋಟ ಉಂಟಾಗಿದೆ.

ಘಟನೆಯಲ್ಲಿ ಮಹಿಳೆ, ಆಕೆಯ ಪುತ್ರ ಸೇರಿದಂತೆ ಇತರರು ಗಾಯಗೊಂಡಿದ್ದು, ಮನೆಯಲ್ಲಿದ್ದ ಲಕ್ಷಾಂತರ ಮೌಲ್ಯದ ವಸ್ತುಗಳು ಹಾನಿಗೊಂಡಿವೆ.

ಗಾಯಾಳುಗಳನ್ನು ತಕ್ಷಣ ಕೊಣನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಳೇಬೀಡು ಸೆಸ್ಕ್ ಕಚೇರಿ ಎದುರು ನಾಳೆ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಸಮರ್ಪಕ ವಿದ್ಯುತ್ ಪೂರೈಕೆ ಖಂಡಿಸಿ ಏ. 1ರಂದು ಹಳೇಬೀಡಿನ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಬೇಸಿಗೆ ಆರಂಭವಾಗಿರುವುದರಿಂದ ಬೆಳೆಗಳು ಒಣಗುತ್ತಿವೆ. ಸಾಲ ಸೋಲ ಮಾಡಿ ಕೈಗೊಂಡಿರುವ ಕೃಷಿ ಕೈ ಹಿಡಿಯಬೇಕೆಂದರೆ ನೀರುಣಿಸುವ ಅಗತ್ಯತೆ ಹೆಚ್ಚಿದೆ. ಆದರೆ ಸೆಸ್ಕಾಂ ಅಧಿಕಾರಿಗಳು ಇಲ್ಲಸಲ್ಲದ ನೆಪವೊಡ್ಡಿ ವಿದ್ಯುತ್ ಕಡಿತ ಮಾಡುತ್ತಿದ್ದಾರೆ ಎಂದರು.

ಏ. 1ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಹಳೇಬೀಡಿನ ಹೊಯ್ಸಳ ವೃತ್ತದಿಂದ ಸೆಸ್ಕಾಂ ಕಚೇರಿ




ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು. ಹಳೇಬೀಡು ಹೋಬಳಿ ಗಂಗೂರು ಎಂಯುಎಸ್‌ಎಸ್ ಘಟಕದ ವ್ಯಾಪ್ತಿಯ ರೈತರಿಗೆ ಸಮರ್ಪಕ ವಿದ್ಯುತ್ ಕೊಡದೆ ಪ್ರತಿದಿನ ಕೇವಲ 2-3 ಗಂಟೆ ಕರೆಂಟ್ ಕೊಡುವುದರಿಂದ ರೈತರಿಗೆ ತೊಂದರೆ ಆಗುತ್ತಿದೆ. ಒಂದೇ ಒಂದು ಕೊಳವೆ ಬಾವಿಗೂ ವಿದ್ಯುತ್ ನೀಡುತ್ತಿಲ್ಲ. ಸಮಸ್ಯೆ ಸರಿಯಾಗಲು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗೆ ಪ್ರಸ್ತಾವನೆ ಕಳಿಸಿ ಎಂದರೆ ಅದನ್ನು ಅಧಿಕಾರಿ ಮಾಡುತ್ತಿಲ್ಲ ಎಂದು ದೂರಿದರು.

ರಾಜ್ಯ ಸರ್ಕಾರ ತ್ರಿ ಫೇಸ್ ವಿದ್ಯುತ್ ನೀಡಬೇಕೆಂದು ಘೋಷಣೆ ಮಾಡಿದ್ದರೂ, ಅಧಿಕಾರಿಗಳು ಅದನ್ನು ಕಾರ್ಯಗತ ಮಾಡುತ್ತಿಲ್ಲ. ಈ ಬಗ್ಗೆ ಕೇಳಿದರೆ ಜೆಇ ಮತ್ತು ಎಇ ಸ್ಪಂದಿಸದೆ ಉಡಾಫೆ ಉತ್ತರ ನೀಡುತ್ತಾರೆ. ದಲಿತ ಅಧಿಕಾರಿ ಆಗಿರುವ ಇಂಜಿನಿಯರ್ ರೈತರಿಗೆ ಪೂರಕವಾದ ಕೆಲಸ ಮಾಡುವುದನ್ನು ಬಿಟ್ಟು ಬೇಡವಾದ ತಪ್ಪುಗಳನ್ನು ಹುಡುಕುತ್ತಾರೆ. ಹಳೇಬೀಡು ಹೋಬಳಿಯಲ್ಲಿ ದಲಿತರು ಒಂದೇ ಒಂದು ಅಕ್ರಮ ಸಂಪರ್ಕ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹೇಶ್ ಗಂಗೂರು, ರೈತ ಮುಖಂಡ ಮೂಡಲ ಗಿರಿಗೌಡ, ದಲಿತ ಮುಖಂಡ ರತೀಶ್ ಅಪ್ಪಗೌಡನಹಳ್ಳಿ, ದಸಂಸ ಜಿಲ್ಲಾ ಸಂಚಾಲಕ ಲಿಂಗರಾಜು ಹಳೇಬೀಡು, ಜಿ.ಆರ್.ರಂಗಸ್ವಾಮಿ ಇದ್ದರು.

## ಯಾವುದೇ ಸಾಧನೆಗೆ ದೇವರ ಆಶೀರ್ವಾದ ಕಾರಣ: ಸದಾನಂದಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನಾನು ಕೇಂದ್ರ ಸಚಿವ, ಮುಖ್ಯಮಂತ್ರಿಯಾಗಿ ಸಾಧನೆ ಮಾಡಿದ್ದೇನೆಂದರೆ ಅದಕ್ಕೆ ದೇವರ ಆಶೀರ್ವಾದವೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.

ತಾಲೂಕಿನ ವಣಗೂರಿನಲ್ಲಿರುವ ತಮ್ಮ ಕುಲದೈವದ ಮೂಲಸ್ಥಾನ ಶ್ರೀ ಸಬ್ಬಮ್ಮ ದೇವಿ ದೇವಾಲಯಕ್ಕೆ ಸೋಮವಾರ ಕುಟುಂಬ ಸಮೇತ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು,

ಕುಲದೇವರ ಭೇಟಿಗೆ ಯೋಗ ಇರಬೇಕು. ಭಕ್ತನಾಗಿ ನನ್ನನ್ನು ಮರೆತಿದ್ದೀಯ ಎಂದು ದೇವರು ನೆನಪು ಮಾಡಿಕೊಟ್ಟಿದೆ. ಅವ್ಯಕ್ತ ಶಕ್ತಿಯ ರೂಪವೇ ದೇವರು ಎಂದರು.

ಸಮಾಜದ ಚಿಂತನೆ ಮಾಡುವತ್ತ ಗಮನ ಹರಿಸಬೇಕೆಂದು ನಮ್ಮ ಪರಂಪರೆ



ಹೇಳುತ್ತದೆ. ರಾಜ್ಯದ ಎಲ್ಲಾ ಜನರ ಸಹಕಾರದಿಂದ ಮುಖ್ಯಮಂತ್ರಿಯಾಗುವ ಸದಾವಕಾಶ ದೊರೆಯಿತು. ವಿ.ಎಸ್. ಆಚಾರ್ಯ ನನ್ನ ರಾಜಕೀಯ ಗುರು. ಅದೇ ರೀತಿ ಬಿ.ಬಿ.ಶಿವಪ್ಪ ಹಾಗೂ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ನಾನು ರಾಜಕೀಯದಲ್ಲಿ ಉನ್ನತ ಸ್ಥಾನಗಳನ್ನು ಗಳಿಸಲು ಸಾಧ್ಯವಾಯಿತು. ಗೌಡರು ಮಾತ್ರವಲ್ಲದೆ ಎಲ್ಲಾ ಸಮುದಾಯದವರು ನಮ್ಮನ್ನು ಬೆಳೆಸಿದ್ದಾರೆ. ಈ ಎಲ್ಲದರ ಹಿಂದಿನ ಶಕ್ತಿಯೇ ದೇವರೆಂದು ಪ್ರತಿಪಾದಿಸಿದರು.


ಗಳಿಸಿರುವ ಆಸ್ತಿ ರಕ್ಷಿಸಿಕೊಳ್ಳುವ, ರಾಜಕಾರಣಿಗಳಿಗೆ ಅಧಿಕಾರ ಉಳಿಸಿಕೊಳ್ಳುವ ಅನಿವಾರ್ಯತೆ ಇರುತ್ತದೆ. ಅದಕ್ಕಾಗಿ ನಾವು ಆರಾಧ್ಯ ದೇವರ ಮೊರೆ ಹೋಗುತ್ತೇವೆ. ನಿತ್ಯ ನಾವು ದೇವರ ಪೂಜೆಯಲ್ಲಿ ಪಾಲ್ಗೊಂಡರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆಂದರು.

ಜವಾಬ್ದಾರಿ ಸಿಕ್ಕ ಸಂದರ್ಭದಲ್ಲಿ ಅದನ್ನು ಸಮರ್ಪಕವಾಗಿ ನಿರ್ವಹಿಸುವ ಸಂದರ್ಭದಲ್ಲಿ ಇನ್ನೊಬ್ಬರಲ್ಲಿ ದೇವರನ್ನು ಕಂಡರೆ ಅಂತಹ ವ್ಯಕ್ತಿ ಜೀವನದಲ್ಲಿ ಯಶಸ್ವಿಯಾಗುತ್ತಾನೆ. ಸುಳ್ಯ ತಾಲ್ಲೂಕಿನ ಮಂಡೆಕೋಲು ಎಂಬ ಕುಗ್ರಾಮದಲ್ಲಿ ಜನಿಸಿದ ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಬೆಳೆದಿದ್ದೇನೆಂದರೆ ಅದಕ್ಕೆ ದೇವರ ಆಶೀರ್ವಾದ ಕಾರಣ. ಇದು ನನಗೆ ಸಿಕ್ಕ ಭಾಗ್ಯವಾಗಿದೆ.

ಸಮಾಜದ ಕಾರ್ಯವನ್ನು ಅತ್ಯಂತ ಜವಾಬ್ದಾರಯಿಂದ ನಿಭಾಯಿಸಿದ್ದೇನೆ. ಮುಖ್ಯಮಂತ್ರಿ ಆಗಿದ್ದಾಗ ಅರೆಭಾಷಿಕ ಅಕಾಡೆಮಿ ಸ್ಥಾಪಿಸಿದ್ದೇನೆ. ನನಗೆ ಸಿಕ್ಕ ಅಧಿಕಾರದಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆ. ಮುಖ್ಯಮಂತ್ರಿ ಆಗಿದ್ದರೂ ಮೂಲ ದೇವರಿಗೆ ಬರಲು ಸಾಧ್ಯವಾಗಿರಲಿಲ್ಲ, ಈಗ ದೇವರೇ ಇಲ್ಲಿಗೆ ಕರೆಸಿಕೊಂಡಿದೆಯೆಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು, ದೇವಾಲಯ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಜರಿದ್ದರು.

## ಕುಪ್ಪುಗೋಡಿನಲ್ಲಿ ಕಾಡಾನೆ ಆಕ್ರೋಶಕ್ಕೆ ಆಟೋ ಜಖಂ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮನೆ ಬಳಿ ನಿಲ್ಲಿಸಿದ್ದ ಆಟೋವನ್ನು ಸಲಗವೊಂದು ಸೊಂಡಿಲಲ್ಲಿ ಎತ್ತಿ ಹಾಕಿ ಜಖಂಗೊಳಿಸಿರುವ ಘಟನೆ ತಾಲೂಕಿನ ಕುಪ್ಪುಗೋಡು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೂಲಿ ಕಾರ್ಮಿಕ ಹಾಗೂ ಆಟೋ ಚಾಲಕ ಕೃಷ್ಣಪ್ಪ ಎಂಬುವರು ಮನೆ ಮುಂದೆ ತಮ್ಮ ಆಟೋ ನಿಲ್ಲಿಸಿದ್ದರು. ಸೋಮವಾರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಏಕಾಏಕಿ ಮನೆ ಬಳಿಗೆ ಬಂದ ಸಲಗ, ಆಟೋವನ್ನು ಎತ್ತಿ ಬಿಸಾಡಿ ಜಖಂಗೊಳಿಸಿದೆ. ಮನುಷ್ಯರ ಮೇಲಿನ ಸಿಟ್ಟಿಗೆ ಆಟೋ ಹಾನಿಯಾಗಿದ್ದು, ಕೃಷ್ಣಪ್ಪ ಅವರು ತೊಂದರೆ ಅನುಭವಿಸುವಂತಾಗಿದೆ.

ಭಾನುವಾರದಿಂದ ಸುಮಾರು ಹತ್ತು ಕಾಡಾನೆಗಳ ಹಿಂಡು ಈ ಭಾಗದಲ್ಲಿ ಬೀಡು ಬಿಟ್ಟಿದ್ದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಮಾಡುತ್ತಿವೆ. ಇದರಿಂದ ಈ ಭಾಗದಲ್ಲಿ ದಿನದಿಂದ ದಿನಕ್ಕೆ ಕಾಡಾನೆ ಸಮಸ್ಯೆ ಬಿಗಡಾಯಿಸುತ್ತಿದ್ದು, ಕಾಫಿ ತೋಟ ಮತ್ತಿತರ ಕಡೆಗಳಲ್ಲಿ ಕೆಲಸ ಮಾಡಲು ಕಾರ್ಮಿಕರು ಹೆದರುತ್ತಿದ್ದಾರೆ. ಹೆಚ್ಚು ಮಂದಿ ತೋಟ ಹಾಗೂ ಬೇರೆ ಬೇರೆ ಕಡೆ ಹೋಗಲು ಹೆದರುತ್ತಿದ್ದಾರೆ. ಕುಪ್ಪಗೋಡು ಗ್ರಾಮದ ಬಳಿ ಆನೆಗಳ ಸಂಚಾರ ಹೆಚ್ಚಾಗಿದ್ದು, ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಸ್ಥಳೀಯರಲ್ಲಿ ಮನೆ ಮಾಡಿರುವ ಆತಂಕ ದೂರ ಮಾಡಬೇಕು ಎಂದು ಒತ್ತಾಯಿಸಿದರು.

## ವಿಶ್ವಕ್ಕೆ ಶಾಂತಿ ಸಂದೇಶ ಸಾರಿದ್ದು ಜೈನ ಧರ್ಮ: ಶಾಸಕ ಸ್ವರೂಪ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಾಂತಿ, ಸಹಾನುಭೂತಿ ಹಾಗು ಅಹಿಂಸೆಯ ಸಂದೇಶ ಸಾರಿದ ಜೈನ ಧರ್ಮ ಬದುಕುವ ದಾರಿ ಕಲಿಸಿಕೊಟ್ಟಿದೆ ಎಂದು ಶಾಸಕ ಹೆಚ್ .ಪಿ.ಸ್ವರೂಪ್ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸೋಮವಾರ ನಡೆದ ಭಗವಾನ್ ಶ್ರೀ ಮಹಾವೀರ ಜಯಂತಿಯಲ್ಲಿ ಮಾತನಾಡಿದ ಅವರು, ಅಹಿಂಸೆ, ಸಹಾನುಭೂತಿ, ಶಾಂತಿ ಮತ್ತು ಸೌಹಾರ್ದತೆಯ ಮಹತ್ವವನ್ನು ಮಹಾವೀರ ಅವರು ಪ್ರತಿಪಾದಿಸಿದ್ದಾರೆ. ಜೈನ ಸಮುದಾಯ ಜಿಲ್ಲೆಯಲ್ಲಿ ಶಿಕ್ಷಣ, ಧರ್ಮ ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ವಿಶಿಷ್ಟ ಛಾಪು




ಮೂಡಿಸಿದೆ. ಶ್ರವಣಬೆಳಗೊಳದ ವಿಶ್ವ ಪ್ರಸಿದ್ಧ ಗೋಮಟೇಶ್ವರ ಪ್ರತಿಮೆ ಮತ್ತು ಹಾಸನದ ಬಸದಿಗಳು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಜಿಲ್ಲೆಗೆ ಕೀರ್ತಿ ತಂದುಕೊಟ್ಟ ಮಹತ್ವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕುರುಹು ಎಂದರು.

ತಮ್ಮ ತಂದೆ ನಗರಸಭೆ ಅಧ್ಯಕ್ಷರಾಗಿದ್ದಾಗ ಉಪಾಧ್ಯಕ್ಷರಾಗಿದ್ದ ಫಣಿರಾಜು ಅವರ ಕಾಲದಲ್ಲಿ ಜೈನ ಸಮುದಾಯದವರು ನಗರಾಭಿವೃದ್ಧಿಗೆ ನೀಡಿದ ಕೊಡುಗೆ ಅಪಾರ. ತಾವು ಕೂಡ ಶ್ರವಣಬೆಳಗೊಳ ಬಾಹುಬಲಿ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿ ಇಂಜಿನಿಯರಿಂಗ್ ಪದವಿ ಪಡೆದಿದ್ದನ್ನು ನೆನಪಿಸಿಕೊಂಡ ಸ್ವರೂಪ್, ಇದೀಗ ಜನರ ಆಶೀರ್ವಾದದಿಂದ ಶಾಸಕರಾಗಲು ಸಾಧ್ಯವಾಯಿತು ಎಂದು ಹೇಳಿದರು.

ತಮ್ಮ ತಂದೆ 4 ಬಾರಿ ಶಾಸಕರಾಗಲು ಜೈನ ಸಮುದಾಯದ ಬೆಂಬಲವೇ ಪ್ರಮುಖ ಕಾರಣ. ಆ ಆತ್ಮೀಯ ಸಂಬಂಧವನ್ನು ಮುಂದುವರಿಸುತ್ತೇವೆ. ಜೈನ ಸಮುದಾಯದವರು ಸದಾ ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳನ್ನು ಪಾಲಿಸಿಕೊಂಡು ಬಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯಾರಿಗೂ ಹಾನಿ ಮಾಡದೆ, ಮಾನವೀಯ ಗುಣಗಳಿಂದ ಮನಸ್ಸುಗಳನ್ನು ಗೆಲ್ಲುವುದೇ ನಿಜವಾದ ಧರ್ಮ. ಪ್ರತಿಯೊಬ್ಬರೂ ಸಹನೆ, ಪ್ರೀತಿ ಮತ್ತು ಸಹಕಾರ ಮನೋಭಾವದಿಂದ ಬದುಕಿದರೆ ಸಮಾಜದಲ್ಲಿ ಶಾಂತಿ ಮತ್ತು ಏಕತೆ ಸಾಧ್ಯ ಎಂದರು.

ಕೇಂದ್ರೀಯ ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಚಂದ್ರಕಾಂತ್ ಪಡೆಸೂರು ಅವರು ಮಾತನಾಡಿ, ಜೈನ ಧರ್ಮ ಮತ್ತು ಅದರ ತತ್ವಶಾಸ್ತ್ರ ಅನಾದಿ ಕಾಲದಿಂದಲೂ ಹರಿದು ಬರುತ್ತಿರುವ ಪವಿತ್ರ ಆಧ್ಯಾತ್ಮಿಕ ಪರಂಪರೆಯಾಗಿದೆ. ಪ್ರತಿಯೊಂದು ಯುಗದಲ್ಲೂ ಧರ್ಮದ ಸ್ಥಾಪನೆ ಹಾಗು ಮಾನವ ಕುಲಕ್ಕೆ ಸತ್ಪಥದ ದಾರಿ ದೀಪವಾಗಲು ಒಂದರಿಂದ 24 ತೀರ್ಥಂಕರರು ಭೂಮಿಗೆ ಅವತರಿಸಿ ದೈವಿಕ ಸಂದೇಶ ಸಾರುತ್ತಾರೆಂಬ ನಂಬಿಕೆ ಜೈನ ಸಂಪ್ರದಾಯದಲ್ಲಿದೆ ಎಂದರು.

ಪ್ರಸ್ತುತ ಯುಗದಲ್ಲಿ ಪ್ರಥಮ ತೀರ್ಥಂಕರರಾದ ಭಗವಾನ್ ಶ್ರೀ ವೃಷಭದೇವರಿಂದ ಆರಂಭವಾಗಿ, 24ನೇ ಹಾಗೂ ಅಂತಿಮ ತೀರ್ಥಂಕರ ಭಗವಾನ್ ಮಹಾವೀರರ ಮೂಲಕ ಈ ಧಾರ್ಮಿಕ ಪರಂಪರೆ ಪೂರ್ಣತೆ ಕಂಡಿದೆ ಎಂದು ಹೇಳಿದರು.

ಈ ಆಚರಣೆ ಕೇವಲ ಒಂದು ಹಬ್ಬವಾಗಿರದೇ, ಮಾನವೀಯ ಮೌಲ್ಯಗಳು, ಶಾಂತಿ, ಸಹಿಷ್ಣುತೆ ಮತ್ತು ಅಹಿಂಸೆಯ ಮಹತ್ವ ಸಾರುವ ಆಧ್ಯಾತ್ಮಿಕ ಸಂಭ್ರಮವಾಗಿಯೂ ಪರಿಗಣಿಸಲಾಗುತ್ತದೆಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ.ತಾರಾನಾಥ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಖಜಾಂಚಿ ಹೇಮಂತ್, ಜೈನ ಸಂಘದ ಅಧ್ಯಕ್ಷ ಹೆಚ್.ಶಾಂತೀಶ್, ಮಹಾವೀರ ಭವನದ ಅಧ್ಯಕ್ಷ ಹೆಚ್.ಡಿ.ನಾಗೇಂದ್ರಯ್ಯ. ತೇರಾಪಂತ್ ಸಭಾದ ಅಧ್ಯಕ್ಷ ಸೋಹನ್ ಲಾಲ್, ಮೂರ್ತಿಪೂಜಕ್ ಜೈನ್ ಸಂಘದ ಅಧ್ಯಕ್ಷ ಅಮೃತಲಾಲ್ ಜೈನ್, ಕಮಲೇಶ್ ಮತ್ತಿತರರಿದ್ದರು.

## ರಥೋತ್ಸವ ವೇಳೆ ಕುರಾನ್ ಪಠಣಕ್ಕೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬೇಲೂರಿನ ಚನ್ನಕೇಶವ ಸ್ವಾಮಿ ಬ್ರಹ್ಮ ರಥೋತ್ಸವ ವೇಳೆ ಮುಸ್ಲಿಂ ಖಾಜಿಯವರು ಕುರಾನ್ ಪ್ರಾರ್ಥನೆ ಮಾಡುವುದು ಖಂಡನೀಯ. ಅದಕ್ಕೆ ಅಧಿಕಾರಿಗಳು ಅವಕಾಶ ಮಾಡಿಕೊಡಬಾರದು ಎಂದು ಹಿಂದು ದೇವಾಲಯಗಳ ಅರ್ಚಕರ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಎಂ.ಎಸ್.ವಿಶ್ವನಾಥ್ ದೀಕ್ಷಿತ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿರುವ ಹಾಗು ವಿಶ್ವವಿಖ್ಯಾತ ದೇವಾಲಯಗಳಲ್ಲಿ ಒಂದಾದ ಶ್ರೀ ಚನ್ನಕೇಶವ




ದೇವಾಲಯದಲ್ಲಿ ನಡೆಯುವ ರಥೋತ್ಸವವು ಶಾಂತಿ, ಸೌಹಾರ್ದದ ಸಂಕೇತವಾಗಿದೆ ಎಂದರು.

ರಥೋತ್ಸವದಲ್ಲಿ ಖಾಜಿಯವರು ಬಂದು ಪ್ರಾರ್ಥನೆ ಮಾಡುವುದರ ಬಗ್ಗೆ ಹಿಂದೂ ಧಾರ್ಮಿಕ ಇಲಾಖೆಯ ಯಾವುದೇ ನಿಯಮಾವಳಿಯಲ್ಲಿಯೂ ಉಲ್ಲೇಖವಿಲ್ಲ. ಆದರೆ ಕೆಲ ವರ್ಷಗಳ ಹಿಂದೆ ಯಾರೋ ಒಬ್ಬರ ಹಿತಾಸಕ್ತಿಗಾಗಿ ಖಾಜಿಯವರು ರಥದ ಮುಂದೆ ನಿಂತು ಕುರಾನ್ ಪಠಣ ಮಾಡಿದ್ದರಿಂದ ಆ ಪದ್ಧತಿ ಮುಂದುವರಿದುಕೊಂಡು ಬಂದಿದೆ. ನಿಯಮ ಮೀರಿ ಮಾಡುತ್ತಿರುವ ಈ ಪ್ರಕ್ರಿಯೆಗಳು ನಿಲ್ಲಬೇಕು.

ಹಿಂದೂ ಭಾವನೆಗಳಿಗೆ ಮನ್ನಣೆ ನೀಡಬೇಕು. ಕುರಾನ್ ಪಠಣಕ್ಕೆ ಅವಕಾಶ ಕೊಟ್ಟು ಹಿಂದೂ ಧರ್ಮಕ್ಕೆ ಹಾಗು ಚನ್ನಕೇಶವ ಸ್ವಾಮಿ ಭಕ್ತರಿಗೆ ಧಕ್ಕೆ ಉಂಟುಮಾಡುವ ಕೆಲಸ ಮಾಡಬಾರದು. ಅಲ್ಲದೆ ಇದಕ್ಕೆ ಸಂಪೂರ್ಣ ಹೊಣೆ ಜಿಲ್ಲಾಡಳಿತ ಹಾಗು ತಾಲ್ಲೂಕು ಆಡಳಿತದ್ದಾಗಿದ್ದು, ಯಾವುದೇ ರೀತಿಯ ಪಠಣಕ್ಕೆ ಅವಕಾಶ ನೀಡಬಾರದೆಂದು ಮನವಿ ಮಾಡಿದರು.

## ಆಂಜನೇಯ ದೇವಾಲಯದಲ್ಲಿ ಲಕ್ಷ ತುಳಸಿ ಅರ್ಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರೀ ರಾಮ ನವಮಿ ಪ್ರಯುಕ್ತ ನಗರದ ರೈಲ್ವೆ ನಿಲ್ದಾಣ ಮುಂಭಾಗದ ಶ್ರೀ ಆಂಜನೇಯ ದೇವಾಲಯದಲ್ಲಿ ಲಕ್ಷ ತುಳಸಿ ಅರ್ಚನೆ ನೆರವೇರಿತು.

ರಾಮ ನವಮಿ ದಿನದಿಂದ ಸದಾ ರಾಮ ನಾಮ ಲೇಖನ ಯಜ್ಞ ಪ್ರಾರಂಭಿಸಲಾಯಿತು. ವೇದ ಭಾರತಿ ಸಂಚಾಲಕ ಹರಿಹರಪುರ ಶ್ರೀಧರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಕ್ಕಳು ಹಿರಿಯರೆನ್ನದೇ ಎರಡು ಸಾವಿರಕ್ಕೂ ಹೆಚ್ಚು ಜನರು ರಾಮ ನಾಮ ಲೇಖನ ಯಜ್ಞದಲ್ಲಿ ಭಾಗಿಯಾದರು. ದೇವಾಲಯಕ್ಕೆ ಬಂದ ಪ್ರತಿಯೊಬ್ಬ ಭಕ್ತರು ಸ್ವಯಂ ಸೇವಕರು ನೀಡಿದ ತುಳಸಿಯನ್ನು ಭಗವಂತನಿಗೆ ಸಮರ್ಪಿಸಿದರು. ಪ್ರಧಾನ ಅರ್ಚಕ ರಕ್ಷಿತ್ ಭಾರದ್ವಾಜ್ ಹಾಗೂ ಇತರರು ಪಾಲ್ಗೊಂಡಿದ್ದರು.

# ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ

## ಮುಂಬೈ ಮೂಲದ ಕಂಪನಿಗೆ ಟೆಂಡರ್ | 16 ತಿಂಗಳಲ್ಲಿ ಅಗಿಲೆ ಸ್ವಚ್ಛ ತಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಹೊರವಲಯದ ಅಗಿಲೆ ನೆಲಭರ್ತಿ ಘಟಕದಲ್ಲಿ ದಶಕಗಳಿಂದ ಸಂಗ್ರಹವಾಗಿರುವ ತ್ಯಾಜ್ಯ ವಿಲೇವಾರಿಗೆ ಮಹಾನಗರ ಪಾಲಿಕೆ ಕೊನೆಗೂ ಕ್ರಮ ಕೈಗೊಂಡಿದ್ದು ಸಮಸ್ಯೆಗೆ ಮುಕ್ತಿ ಸಿಗುವ ನಿರೀಕ್ಷೆ ಮೂಡಿದೆ.

ನಗರದಲ್ಲಿ ನಿತ್ಯ 100 ಟನ್‌ನಷ್ಟು ತ್ಯಾಜ್ಯ ಸಂಗ್ರಹವಾಗುತ್ತದೆ. ನಗರಸಭೆ ಇದ್ದಾಗ 75 ರಿಂದ 80 ಟನ್‌ಗಷ್ಟೇ ಸೀಮಿತವಾಗಿದ್ದ ಕಸದ ಪ್ರಮಾಣ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಸುತ್ತಲಿನ ಹಳ್ಳಿಗಳ ತ್ಯಾಜ್ಯವನ್ನು ಪಾಲಿಕೆಯೇ ವಿಲೇವಾರಿ ಮಾಡಬೇಕಾಗಿದೆ. ಅದರಿಂದ ತ್ಯಾಜ್ಯದ ಮಿತಿ ಏರಿಕೆಯಾಗಿದ್ದು ವೈಜ್ಞಾನಿಕ ವಿಲೇವಾರಿ ಸವಾಲಾಗಿ ಪರಿಣಮಿಸಿದೆ. ಹಲವು ವರ್ಷಗಳಿಂದ ಅಗಿಲೆ ನೆಲಭರ್ತಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆಯಾದರೂ ಆಧುನಿಕ ಯಂತ್ರೋಪಕರಣಗಳ ಕೊರತೆ, ಸೀಮಿತ ಸಿಬ್ಬಂದಿ ಹಾಗು ತ್ಯಾಜ್ಯ ಪ್ರಮಾಣ ಹೆಚ್ಚಿರುವುದರಿಂದ ವಿಲೇವಾರಿ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ.

8 ಕೋಟಿ ರೂ.ಗೆ ಟೆಂಡರ್:

ಘಟಕದಲ್ಲಿ ಅಂದಾಜು 1.50 ಲಕ್ಷ ಟನ್‌ನಷ್ಟು ತ್ಯಾಜ್ಯವಿದ್ದು ಅದನ್ನು ವಿದ್ಯುತ್ ಉತ್ಪಾದನೆ ಉದ್ದೇಶದಿಂದ ಖಾಸಗಿ ಸಂಸ್ಥೆಗೆ ನೀಡಲಾಗಿದೆ. 8 ಕೋಟಿ ರೂ.ಗೆ ಟೆಂಡರ್ ಮುಗಿದಿದ್ದು ಶೀಘ್ರವೇ ಕಸದ ಸಮಸ್ಯೆಗೆ ಪರಿಹಾರ ದೊರೆಯಲಿದೆ. ದಶಕಗಳಿಂದ ಕಸ ಸುರಿಯುತ್ತಲೇ ಇರುವ ಪರಿಣಾಮ ದುರ್ನಾತ ಬೀರುತ್ತಿದೆ. ಮಾಂಸ, ಮತ್ತಿತರ ಪದಾರ್ಥಗಳನ್ನು ಅರಸಿ ಬೀದಿ ನಾಯಿಗಳು ಬರುತ್ತವೆ. ತ್ಯಾಜ್ಯ ಸುತ್ತಲಿನ ಜಮೀನಿಗೂ ವ್ಯಾಪಿಸುತ್ತಿರುವುದರಿಂದ ಕೃಷಿ ಚಟುವಟಿಕೆಗೂ ಅಡ್ಡಿಯಾಗುತ್ತಿದೆ. ಹೀಗಾಗಿ ಅಗಿಲೆ ಹಾಗು ಸುತ್ತಲಿನ ಗ್ರಾಮಸ್ಥರು ಮಹಾನಗರ ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಲೇ ಇದ್ದಾರೆ. ಈ ಎಲ್ಲಾ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಅಧಿಕಾರಿಗಳು ಲಕ್ಷ ಟನ್ ತ್ಯಾಜ್ಯಕ್ಕೆ ಮುಕ್ತಿ ಕಾಣಿಸಲು ನಿರ್ಧರಿಸಿದ್ದಾರೆ. ಅಗಿಲೆ ಘಟಕದಲ್ಲಿ ಜಾಗ ಲಭ್ಯವಾದರೆ ನಗರದಲ್ಲಿ ಸಂಗ್ರಹವಾಗುತ್ತಿರುವ ಕಸವನ್ನು ಅಲ್ಲಿಗೆ ಹಾಕಬಹುದು ಎಂಬುದು ಲೆಕ್ಕಾಚಾರವಾಗಿದೆ.

ನಗರದ ಸೌಂದರ್ಯ ವೃದ್ಧಿ ಹಾಗೂ ವೈಜ್ಞಾನಿಕ ಕಸ ವಿಲೇವಾರಿಗಾಗಿ ಸ್ಟಾಟರ್ ಹೌಸ್, ಡಂಪಿಂಗ್ ಯಾರ್ಡ್‌ನಲ್ಲಿ ಬಯೋ ಮೈನಿಂಗ್ ಇತ್ಯಾದಿ ನಿರ್ಮಾಣಕ್ಕೆ 25.30 ಕೋಟಿ ರೂ.ಗಳನ್ನು 2026-27ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿಡಲಾಗಿದೆ.




### ತ್ಯಾಜ್ಯ ವಿಲೇವಾರಿಗೆ ಬೇಕು 16 ತಿಂಗಳು

ಮುಂಬೈನ ಆದರ್ಶ್ ಭಾರತ್ ಪ್ರೈವೆಟ್ ಲಿಮಿಟ್‌ಗೆ ತ್ಯಾಜ್ಯ ವಿಲೇವಾರಿ ಟೆಂಡರ್ ಆಗಿದ್ದು, ಅಗಿಲೆ ನೆಲಭರ್ತಿ ಘಟಕದಲ್ಲಿ ಸಂಗ್ರಹವಾಗಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು 16 ತಿಂಗಳು ಸಮಯ ಬೇಕಿದೆ. ಆದಷ್ಟು ಶೀಘ್ರದಲ್ಲೇ ಕೆಲಸ ಪ್ರಾರಂಭವಾಗಲಿದ್ದು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿ ಕಸದಿಂದ ರಸ ಮಾಡುವ ಕೆಲಸಕ್ಕೆ ಚಾಲನೆ ಸಿಗಲಿದೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ.

### ಪ್ರತ್ಯೇಕ ಕಸ ಅನುಷ್ಠಾನ ಕಷ್ಟ

ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ ವಿಪರೀತವಾಗಿರುವ ಹಿನ್ನಲೆಯಲ್ಲಿ ಸಾರ್ವಜನಿಕರಿಂದ ಹಸಿ ಹಾಗೂ ಒಣ ಕಸ ಪ್ರತ್ಯೇಕವಾಗಿ ಸ್ವೀಕರಿಸಿ ವಿಲೇವಾರಿ ಕೆಲಸ ಸುಲಭವಾಗಿಸಿಕೊಳ್ಳಬೇಕೆಂಬ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರುತ್ತಿಲ್ಲ. ಸಾರ್ವಜನಿಕರು ಈ ಬಗ್ಗೆ ಗಂಭೀರವಾಗಿ ಪರಿಗಣಿಸದೆ ಇರುವುದು ಒಂದು ಸಮಸ್ಯೆಯಾದರೆ ಮತ್ತೊಂದೆಡೆ ಕಸ ಸಂಗ್ರಹ ಆಟೋಗಳಲ್ಲಿ ಬರುವ ಸಿಬ್ಬಂದಿ ಸಹ ಎರಡೂ ಬಗೆಯ ಕಸವನ್ನು ಒಟ್ಟಿಗೆ ಹಾಕಿಕೊಳ್ಳುತ್ತಾರೆ. ಅದು ಸಂತೆಪೇಟೆಯಲ್ಲಿ ನಡೆಯುವ ಕಸ ಪ್ರತ್ಯೇಕಿಸುವ ಕಾರ್ಯಕ್ಕೆ ವೇಗ ನೀಡಲು ಸಾಧ್ಯವಾಗುತ್ತಿಲ್ಲ.

ಪೌರ ಕಾರ್ಮಿಕರು ಹಾಗೂ ಹೊರಗುತ್ತಿಗೆ ಆಧಾರದಡಿ ಕಸ ಸಂಗ್ರಹ ಕೆಲಸಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಮನೆ ಮನೆಗೆ ಹೋಗುವುದಕ್ಕಿಂತ ಹೋಟೆಲ್, ಅಂಗಡಿ ಮುಂಗಟ್ಟುಗಳತ್ತ ದೃಷ್ಟಿ ಹರಿಸುತ್ತಾರೆ. ಮನೆಯವರು ನೀಡುವ ಹಣ ಕಡಿಮೆ ಇದ್ದು, ಅಂಗಡಿಯವರು ಹೆಚ್ಚಿನ ಪ್ರಮಾಣದಲ್ಲಿ ಹಣ ನೀಡುತ್ತಾರೆ. ಹೀಗಾಗಿ ಸಾರ್ವಜನಿಕರು ರಸ್ತೆಯ ಎಲ್ಲೆಂದರಲ್ಲಿ ಕಸ ಸುರಿಯುವ ಪರಿಪಾಠ ಮುಂದುವರಿಸಿಕೊಂಡಿದ್ದಾರೆ. ರಸ್ತೆ ಬದಿ ಕಸ ಸುರಿಯುವವರ ವಿರುದ್ಧ ಮಹಾನಗರ ಪಾಲಿಕೆ ದಂಡ ವಿಧಿಸುವುದು, ತಪ್ಪಿತಸ್ಥರ ಮನೆ ಮುಂದೆ ಕಸ ಸುರಿದು ಪಾಠ ಕಲಿಸಲು ಮುಂದಾಯಿತಾದಾರೂ ಅದು ಕೆಲವೇ ದಿನಗಳಿಗೆ ಸೀಮಿತವಾಯಿತು. ಹೀಗಾಗಿ ಮತ್ತೆ ನಗರದ ಎಲ್ಲೆಂದರಲ್ಲಿ ಅಶುಚಿತ್ವವ ಮಿತಿ ಮೀರಿದೆ.

## ಸಹೋದರಿ 11ನೇ ದಿನದ ಕಾರ್ಯದಲ್ಲಿ ದೇವೇಗೌಡರು ಭಾಗಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಇತ್ತೀಚೆಗೆ ನಿಧನರಾದ ಸಹೋದರಿ ಜವರಮ್ಮ (88) ಅವರ 11ನೇ ದಿನದ ಆರಾಧನಾ ಕಾರ್ಯದಲ್ಲಿ ಭಾಗವಹಿಸಿದರು. ಬೆಂಗಳೂರಿನಿಂದ ಹೆಲಿಕಾಪ್ಟರ್‌ನಲ್ಲಿ ಹುಟ್ಟೂರು ಹರದನಹಳ್ಳಿಗೆ ಬಂದ ಅವರು ಕಾರಿನಲ್ಲಿ ಬಸವನಾಯಕನಹಳ್ಳಿ ಗ್ರಾಮಕ್ಕೆ ಆಗಮಿಸಿ ಪೂಜೆಯಲ್ಲಿ ಪಾಲ್ಗೊಂಡರು. ಸಹೋದರಿಯನ್ನು ನೆನೆದು ದೇವೇಗೌಡರು ಭಾವುಕರಾದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ತಂದೆ ದೊಡ್ಡೇಗೌಡರಿಗೆ ಇಬ್ಬರು ಹೆಂಡತಿಯರು. ಮೊದಲ ಪತ್ನಿಗೆ ಜನಿಸಿದ ಮೂವರು ಗಂಡು ಮಕ್ಕಳು ಅಕಾಲಿಕವಾಗಿ ಸಾವಿಗೀಡಾದ ಬಳಿಕ ತಂದೆ ನಮ್ಮ ತಾಯಿ ದೇವಮ್ಮ ಅವರನ್ನು ವಿವಾಹವಾದರು. ದೇವಮ್ಮಗೆ ನಾನು ಮೊದಲೇ ಮಗ. ಮಾ. 19ರಂದು ನಿಧನರಾಗಿರುವ ಜವರಮ್ಮ ನನಗಿಂತ ಮೂರು ವರ್ಷ ಚಿಕ್ಕವಳು. ಊರಿಗೆ ಸಮೀಪ ಎಂಬ ಕಾರಣಕ್ಕೆ ಬಸವನಾಯಕನಹಳ್ಳಿಯಲ್ಲಿ ಸಂಬಂಧ ಹುಡುಕಿ ಮದುವೆ ಮಾಡಿಕೊಟ್ಟಿದ್ದರು. ಜವರಮ್ಮಗೆ ನಾಲ್ವರು ಪುತ್ರಿಯರು ಹಾಗು ಮೂವರು ಗಂಡು ಮಕ್ಕಳಿದ್ದಾರೆಂದು ತಿಳಿಸಿದರು.

ಜವರಮ್ಮ ನಿಧನರಾದ ಸುದ್ದಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನನಗೆ ತಿಳಿಸಿದರು. ಸಣ್ಣ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಗಳ ಸಾವಿಗೆ ದೇಶದ ಪ್ರಧಾನಿ ಸಂತಾಪ ಸೂಚಿಸಿದರು. ನಾನು ಸಹ ಹಳ್ಳಿಯಲ್ಲೇ ಹುಟ್ಟಿದವನು. ಆಕಸ್ಮಿಕವಾಗಿ ರಾಜಕಾರಣದಲ್ಲಿ ಹೋರಾಟ ಮಾಡಿರಬಹುದು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ ಭಾವನೆಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಮೋದಿ ಸೂಕ್ಷ್ಮ ಮನಸ್ಸಿನವರಾಗಿದ್ದು, ಅವರಿಗೆ ನನ್ನ ಕುಟುಂಬದ ಪರವಾಗಿ ಆಭಾರಿಯಾಗಿದ್ದೇನೆ. ಅವರ ಭಾವನೆಗಳನ್ನು ನಾನು ಜೀವನದ ಕೊನೆಯವರೆಗೆ ಮರೆಯುವುದಿಲ್ಲ ಎಂದರು.

## ಅಡಗೂರು ಜಿನ ಮಂದಿರದಲ್ಲಿ ಮಹಾವೀರ ಜಯಂತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಸಕಲ ಜೀವಿಗಳಿಗೆ ಒಳಿತಾಗಲಿ ಜಗತ್ತಿನಲ್ಲಿ ಶಾಂತಿ ನೆಲೆಸಲಿ ಎಂದು ಅಹಿಂಸೆಯ ಸಂದೇಶವನ್ನು ಸಾರಿದ ಜೈನ ಧರ್ಮದ 24ನೇ ತೀರ್ಥಂಕರ ಭಗವಾನ್ ಮಹಾವೀರರ 2625ನೇ ಜಯಂತೋತ್ಸವ ಸೋಮವಾರ ಅಡಗೂರು ಜಿನ ಮಂದಿರದಲ್ಲಿ ವೈಭವದಿಂದ ನೆರವೇರಿತು.

ಮಹಾವೀರ ಜೈನ ಸಂಘದ, ರತ್ನತ್ರಯ ಮಹಿಳಾ ಸಮಾಜ ಹಾಗೂ ಅಡಗೂರು ಜೈನ ಸಮಾಜದ ಆಶ್ರಯದಲ್ಲಿ ಧಾರ್ಮಿಕ ವಿಧಾನ ನಡೆಯಿತು.

ಜಿನ ಮಂದಿರದಲ್ಲಿ ಮುಂಜಾನೆ 5 ಗಂಟೆಯಿಂದಲೇ ಪುರೋಹಿತರ ಮಂತ್ರ ಪಠಣ ಹಾಗೂ ವಾದ್ಯ ವೈಭವ ಮೊಳಗಿತು. ಬೆಳಿಗ್ಗೆ ನಿತ್ಯ ಪೂಜೆಯಿಂದ ಧಾರ್ಮಿಕ ಆಚರಣೆ ಆರಂಭವಾಯಿತು. ನಂತರ ಜನ್ಮ ಜಯಂತಿಯ ಪೂಜೆ ಪೂಜೆ ನೆರವೇರಿಸಲಾಯಿತು.

ನಂತರ 8 ಗಂಟೆಗೆ ತೀರ್ಥಂಕರರ ಮಸ್ತಕಾಭಿಷೇಕಕ್ಕೆ ಸುಮಂಗಲೆಯರಿಂದ ಆಗ್ರೋಧಕ ತರುವ ಮೆರವಣಿಗೆ ನಡೆಯಿತು. ಮೆರವಣಿಗೆಯೊಂದಿಗೆ ಪಲ್ಲಕ್ಕಿ ಉತ್ಸ ವ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿತು. ಮಹಾವೀರರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಿದ ನಂತರ ಹೂವಿನಿಂದ ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿ ಆರೋಹಣ ಮಾಡಲಾಯಿತು.

ಜೈ ಜೈ ವೀರ ಜೈ ಮಹಾವೀರ, ಅಹಿಂಸೋ ಪರಮೋ ಧರ್ಮ ಕೀ ಜೈ ಎಂಬ ಜಯಘೋಷದೊಂದಿಗೆ ಮೆರವಣಿಗೆ ಸಾಗಿತು. ಪಲ್ಲಕ್ಕಿಯ ಇಕ್ಕೆಲಗಳಲ್ಲಿ ಜೈನ ಶ್ರಾವಕ ಶ್ರಾವಕಿಯರು ಬಣ್ಣದ ಛತ್ರಿಗಳನ್ನು ಹಿಡಿದು ಚಾಮರ ಬೀಸುತ್ತ ಹೆಜ್ಜೆ ಹಾಕಿದರು.

ಪಂಚ ಕಳಸ, ಅಷ್ಟಮಂಗಲ ಹಾಗೂ ಪಂಚವರ್ಣದ ಬಾವುಟ ಮೆರವಣಿಗೆಗೆ ಕಳೆ ನೀಡಿದವು.

ಕಳಸ ಹೊತ್ತ ಮಹಿಳೆಯರು ಜಿನ ಗಾಯನ ಹಾಡುತ್ತ ಸಾಗಿದರು. ಜಿನ ಮಂದಿರ ಪಕ್ಕದ ಮಹಾವೀರ ಭವನದ ಸಭಾಂಗಣ ವೇದಿಕೆಯಲ್ಲಿ ನಿರ್ಮಿಸಿದ ಆಕರ್ಷಕ ಮಂಟಪದಲ್ಲಿ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು. ವಿವಿಧ ಅಭಿಷೇಕಗಳ ಹರಾಜು ಪ್ರಕ್ರಿಯೆ ನಡೆಸಿದ ನಂತರ ಮಹಾವೀರರ ಮಸ್ತಕಾಭಿಷೇಕ ನೆರವೇರಿತು.

108 ಕಳಸಗಳಿಂದ ಜಲಾಭಿಷೇಕ ಮಾಡಿದಾಕ್ಷಣ ಅಮೃತ ಶಿಲೆಯ ಭಗವಾನ್ ಮಹಾವೀರರ ಮೂರ್ತಿಯು ವಿವಿಧ ಭಂಗಿಯಲ್ಲಿ ಕಂಗೊಳಿಸಿತು. ನಂತರ ಎಳನೀರು, ಕ್ಷೀರ (ಹಾಲು), ಇಕ್ಷುರಸ (ಕಬ್ಬಿನಹಾಲು), ನಾಲ್ಕು ದಿಕ್ಕಿನಲ್ಲಿ ಸ್ಥಾಪಿಸಿದ ಸ್ಥಾಪಿಸಿದ ಚತುಷ್ಕೋನ ಕಳಸ, ಶ್ರೀಗಂಧ, ಅರಿಶಿನ, ಕಲ್ಕಚೂರ್ಣ (ಅಕ್ಕಿಹಿಟ್ಟು), ಚಂದನ, ಕಷಾಯಗಳ ಅಭಿಷೇಕದಲ್ಲಿ ಮೂರ್ತಿ ಬಣ್ಣದೋಕುಳಿಯಲ್ಲಿ ಮಿಂದೆದಂತೆ ಕಂಗೊಳಿಸಿತು. ಅಭಿಷೇಕದ ನಂತರ ಸಕಲ ಜೀವಿಗಳಿಗೆ ಶಾಂತಿ ನೆಮ್ಮದಿ ಮುಕ್ತಿ ದೊರಕಲಿ ಎಂದು ಮಹಾಶಾಂತಿ ಮಂತ್ರದೊಂದಿಗೆ ಶಾಂತಿಧಾರೆ ನೆರವೇರಿಸಲಾಯಿತು. ಭಗವಾನ್ ಮಹಾವೀರರ ಆರತಿ ಹಾಡಿನೊಂದಿಗೆ ಮಹಾಮಂಗಳಾರತಿ ನೆರವೇರಿತು.

ಹಿರಿಯ ಮುಖಂಡ ಎ.ಬಿ.ಕಾಂತರಾಜು, ಜೈನ ಸಮಾಜ ಅಧ್ಯಕ್ಷ ಎಂ.ಎ.ನಾಗೇಂದ್ರ, ಕುಮಾರ್, ಕಾರ್ಯದರ್ಶಿ ಎಂ.ಎನ್.ಶಶಿಕುಮಾರ್, ಖಜಾಂಚಿ ಧವನ್ ಜೈನ್, ಪದಾಧಿಕಾರಿಗಳಾದ ಮನ್ಮಥ ರಾಜು, ಚಂದ್ರಪ್ರಭ, ಕರುಣಾಕರ, ಅತುಲ್ ಜೈನ್, ವಿಜಯ್ ಕುಮಾರ್, ಸುಮತಿ ಕುಮಾರ್, ನಾಗಚಂದ್ರ, ವಾದಿರಾಜ್, ರತ್ನತ್ರಯ ಮಹಿಳಾ ಸಮಾಜ ಅಧ್ಯಕ್ಷೆ ಪುಷ್ಪರತ್ನ ರಾಜು, ಕಾರ್ಯದರ್ಶಿ ಸುಧಾ ಕುಮಾರಿ, ಪದಾಧಿಕಾರಿಗಳಾದ ರೇಖಾ ಧವನ್, ಸುನಿತಾ ಕುಮಾರಿ, ಭಾರತಿ ಅತುಲ್, ಜಯಪದ್ಮ ಪಾಲ್ಗೊಂಡಿದ್ದರು.

## ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಚಿತ್ರೀಕರಣ ನಿಷೇಧಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಾಲಯದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ದೇಗುಲದ ಆವರಣದಲ್ಲಿ ಪ್ರೀ ವೆಡ್ಡಿಂಗ್ ಸೇರಿ ಎಲ್ಲಾ ರೀತಿಯ ಚಿತ್ರೀಕರಣ ನಿಷೇಧಿಸಬೇಕು ಹಾಗೂ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

ದೇವಾಲಯದಲ್ಲಿ ಚಿತ್ರೀಕರಣ ನಿಷೇಧ ಹಾಗು ಸಿಸಿಟಿವಿ ಕ್ಯಾಮರಾ ಅಳವಡಿಸುವಂತೆ ಒತ್ತಾಯಿಸಿ ಹಿಂದೂಪರ ಸಂಘಟನೆ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ನಡೆಸಿದ ಸಭೆಯಲ್ಲಿ ಈ ಬಗ್ಗೆ ಒತ್ತಾಯಿಸಲಾಯಿತು.

ಇತ್ತೀಚಿನ ದಿನಗಳಲ್ಲಿ ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಹಾಗು ಪ್ರವಾಸೋದ್ಯಮದ ಹೆಸರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದಾರೆ. ಆದರೆ, ದೇವಾಲಯದ ಪವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಸ್ಥಳೀಯ ಗ್ರಾಮಸ್ಥರು ವಿಧಿಸಿರುವ ನಿಯಮಗಳನ್ನು ಅನೇಕ ಪ್ರವಾಸಿಗರು ಪಾಲಿಸುತ್ತಿಲ್ಲ.



ಇದು ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

ದೇವಸ್ಥಾನದ ಆವರಣದಲ್ಲಿ ಫೋಟೋ ಶೂಟ್ ನಿಷೇಧಿಸಲು ತಾಲ್ಲೂಕು ಆಡಳಿತ ತಕ್ಷಣ ಕ್ರಮ ಕೈಗೊಳ್ಳಬೇಕು. ಸುರಕ್ಷತೆಯ ದೃಷ್ಟಿಯಿಂದ ದೇವಸ್ಥಾನದ ಸುತ್ತಮುತ್ತ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು. ಭದ್ರತಾ ಸಿಬ್ಬಂದಿ ನಿಯೋಜಿಸಬೇಕು. ದೇವಾಲಯದ ಆವರಣಕ್ಕೆ ಯಾರೂ ಪಾದರಕ್ಷೆ ಧರಿಸಿ ಪ್ರವೇಶಿಸಬಾರದು ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹಿಂದು ಹಿತರಕ್ಷಣಾ ವೇದಿಕೆ ಮುಖಂಡರಾದ ರಘು ಸಕಲೇಶಪುರ, ಕೌಶಿಕ್, ಧರ್ಮೇಶ್, ಶಿವು ಜಿಪ್ಪಿ, ವಿನೋದ್ ಕಣಚೂರು, ಪೃಥ್ವಿ ಅವರೇಕಾಡು, ಲೋಕೇಶ್, ಪೃಥ್ವಿ, ಹುರುಡಿ ವಿಕ್ರಂ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭರತ್, ಗ್ರಾಮಸ್ಥರಾದ ರತನ್, ಉಮೇಶ್, ಪ್ರಸನ್ನ ಪೂಜಾರಿ, ಮೇಘ ಪ್ರಶಾಂತ್ ಇತರರಿದ್ದರು.

### ಅಸಹಾಯಕತೆ ವ್ಯಕ್ತಪಡಿಸಿದ ಅರ್ಚಕ

ಪ್ರಿ ವೆಡ್ಡಿಂಗ್ ಶೂಟ್ ಹೆಸರಿನಲ್ಲಿ ಬರುವ ಛಾಯಾಗ್ರಾಹಕರ ಉಪಟಳ ತಾಳಲಾರದೆ ಮುಂಬಾಗಿಲು ಹಾಕಿಕೊಂಡು ಪೂಜೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲ್ಲೂಕಿನ ಕಾಲಭೈರವೇಶ್ವರ ದೇಗುಲದ ಅರ್ಚಕ ಸುಧೀರ್ ಭಟ್ ಅಸಹಾಯಕತೆ ವ್ಯಕ್ತಪಡಿಸಿದರು.

ವಿವಾಹ ಪೂರ್ವ ಜೋಡಿಗಳನ್ನು ದೇವಾಲಯದ ಗೋಡೆಗೆ ಕಾಲು ತಾಗಿದ ರೀತಿಯಲ್ಲಿ ನಿಲ್ಲಿಸಿ ಫೋಟೊ ತೆಗೆಯುತ್ತಿದ್ದರು. ನಾನು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಛಾಯಾಗ್ರಾಹಕರಿಗೆ ಹಾಗೆಲ್ಲ ಮಾಡಬೇಡಿ ಅನಾಗರಿಕರಂತೆ ವರ್ತಿಸಬೇಡಿ ಎಂದು ಬುದ್ಧಿ ಹೇಳಿ ನಂತರ ಪೂಜೆ ಮಾಡಲು ಹೊರಟಿದ್ದೆ. ಅದೇ ವೇಳೆ ಅಲ್ಲಿಗೆ ಬಂದ ಪ್ರಶಾಂತ್ (ಹಲ್ಲೆ ಆರೋಪಿ) ಹಾಗೂ ಕುಟುಂಬಸ್ಥರು ಸಹ, ಈಗ ತಾನೇ ಅರ್ಚಕರು ಅಷ್ಟೆಲ್ಲ ಹೇಳಿದ್ದಾರೆ, ಆದರೂ ಮಾತು ಕೇಳುವುದಿಲ್ಲ ನೀವು ಎಂದು ರೇಗಿದರು. ಅಷ್ಟಕ್ಕೆ ಛಾಯಾಗ್ರಾಹಕನೊಬ್ಬ ಏರುದನಿಯಲ್ಲಿ ಮಾತನಾಡಿದ. ಆ ದಿನ ದೇವಾಲಯದಲ್ಲಿ ಇಷ್ಟೇ ನಡೆಯಿತು ಎಂದು ಹೇಳಿದರು.

## ಸಾಧನೆಗೆ ಬಡತನ ಅಡ್ಡಿಯಾಗುವುದಿಲ್ಲ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೀವನದಲ್ಲಿ ಏನಾದರೂ ಸಾಧಿಸುವ ಗುರಿ ಹೊಂದಿದ್ದರೆ ಬಡತನ, ಸೌಕರ್ಯಗಳ ಕೊರತೆಯಂತ ವಿಚಾರಗಳು ನಗಣ್ಯವಾಗುತ್ತವೆ ಎಂದು ಮಹಿಳಾ ಠಾಣೆ ಪಿಎಸ್‌ಐ ಬಿ.ಎಸ್.ಉಮಾ ಹೇಳಿದರು.

ನಗರದ ಗುಡ್ ಸಿಟಿಜನ್ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯುವತಿಯರು ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಬೇಕು. ಯಶಸ್ಸಿನ ದಾರಿಯಲ್ಲಿ ಸಮಸ್ಯೆಗಳು ನಗಣ್ಯವಾದುದು ಎಂದು ತಿಳಿಸಿದರು.

ಗುಡ್ ಸಿಟಿಜನ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಎಂ. ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪೊಲೀಸ್ ಇಲಾಖೆಯ ರಮ್ಯಾ, ಉಪನ್ಯಾಸಕರಾದ ಸ್ವಪ್ನ, ಸಂಜಯ್ ಕುಮಾರ್, ಶ್ರೀನಿವಾಸ್, ಭಾಗೀರಥಿ, ಪ್ರಿಯಾಂಕ ಇತರರಿದ್ದರು.

## ಮಹಿಳಾ ದಿನ: ಪೌರ ಕಾರ್ಮಿಕರಿಗೆ ಸನ್ಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಮಹಿಳಾ ಘಟಕ ಹಾಗೂ ಅರಳಿಕಟ್ಟೆ ಜೀರ್ಣೋದ್ಧಾರ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಪೌರ ಕಾರ್ಮಿಕರಿಗೆ ಸನ್ಮಾನಿಸಲಾಯಿತು.

ಮಹಾಸಭಾ ತಾಲ್ಲೂಕು ಉಪಾಧ್ಯಕ್ಷೆ ಎಂ.ಬಿ.ಗಿರಿಜಾಂಬಿಕಾ ಮಾತನಾಡಿ, ಸಾರ್ವಜನಿಕರು ಹಾಗೂ ನಗರದ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಸೇವೆ ಶ್ಲಾಘನೀಯವಾಗಿದೆ. ಮಳೆ, ಚಳಿ, ಬಿಸಿಲನ್ನು ಲೆಕ್ಕಿಸದೆ ಪೌರ ಕಾರ್ಮಿಕರು ನಿತ್ಯ ಕೆಲಸ ಮಾಡುತ್ತಾರೆ. ಅವರು ಒಂದು ದಿನ ಕೆಲಸ ಮಾಡದ ದಿನವನ್ನು ನಮ್ಮಿಂದ ಊಹಿಸಲು ಸಾಧ್ಯವಿಲ್ಲ ಎಂದರು.

ಸನ್ಮಾನ ಸ್ವೀಕರಿಸಿದ ಪೌರ ಕಾರ್ಮಿಕರಾದ ಮಂಗಳಮ್ಮ ಮತ್ತು ಅನುರಾಧ ಮಾತನಾಡಿ, ಪೌರ ಕಾರ್ಮಿಕರನ್ನು ಎಂದೂ ಕೀಳಾಗಿ ಕಾಣಬಾರದು. ಸೂರ್ಯ ಉದಯಿಸುವ ಮೊದಲೇ ಎದ್ದು ಕಾಯಕವನ್ನು ನಿಷ್ಠೆಯಿಂದ ಮಾಡುತ್ತೇವೆ. ಆ ಮೂಲಕ ಬದುಕು ಕಟ್ಟಿಕೊಂಡಿದ್ದೇವೆ. ನಮ್ಮದು ನಿತ್ಯವೂ ಹೋರಾಟದ ಬದುಕೆಂದರು.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಮಾತನಾಡಿ, ಕಾಯಕಕ್ಕೆ ಯಾವುದೇ ಮೇಲು ಕೀಳು ಎಂಬುದಿಲ್ಲ. ಆ ನಿಟ್ಟಿನಲ್ಲಿ ಪೌರ ಕಾರ್ಮಿಕರಿಗೆ ಗೌರವ ನೀಡುವುದು ಎಲ್ಲರ ಜವಾಬ್ದಾರಿ ಎಂದರು.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-31

1889: ಐಫೆಲ್ ಟವರ್ ಅನ್ನು ಫ್ರಾನ್ಸ್‌ನ ಪ್ಯಾರಿಸ್ ನಗರದಲ್ಲಿ ಉದ್ಘಾಟಿಸಲಾಯಿತು.

1917 ಅಮೆರಿಕ ಸಂಯುಕ್ತ ಸಂಸ್ಥಾನವು (ಡೆನ್ಮಾರ್ಕ್) ದೇಶದಿಂದ ವರ್ಜಿನ್ ದ್ವೀಪಗಳನ್ನು ಖರೀದಿಸಿತು.

1931: ಮಹಾತ್ಮ ಗಾಂಧಿ ಮತ್ತು ಇರ್ವಿನ್ ವೈಸರಾಯ್ ನಡುವೆ ಗಾಂಧಿ-ಇರ್ವಿನ್ ಒಪ್ಪಂದಕ್ಕೆ ಅಂತಿಮ ರೂಪ ದೊರಕಿತು.

1964: ಮುಂಬೈಯಲ್ಲಿ ಭಾರತದ ಮೊದಲ ಪ್ರಮುಖ ದೂರದರ್ಶನ ಪ್ರಸಾರ ಆರಂಭವಾಯಿತು.

1991: ರಾಜೀವ್ ಗಾಂಧಿ ಅವರು ಲೋಕಸಭೆ ಚುನಾವಣಾ ಪ್ರಚಾರ ಆರಂಭಿಸಿದರು.

**ಜನನ**

1596: ರೆನೇ ಡೆಕಾರ್ಟ್, ಪ್ರಸಿದ್ಧ ತತ್ತ್ವಜ್ಞಾನಿ

1732: ಜೋಸೆಫ್ ಹೈಡನ್, ಸಂಗೀತ ಸಂಯೋಜಕ

1971: ಇವಾನ್ ಮೆಕ್ಗ್ರೆಗರ್, ನಟ

**ಮರಣ**

1727: ಐಸಾಕ್ ನ್ಯೂಟನ್, ಮಹಾನ್ ವಿಜ್ಞಾನಿ

1995: ಸೆಲೆನಾ, ಪ್ರಸಿದ್ಧ ಗಾಯಕಿ

## ಸಾರ್ವಜನಿಕರು ಆರೋಗ್ಯ ಶಿಬಿರದ ಪ್ರಯೋಜನ ಪಡೆಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಒತ್ತಡದ ಜೀವನದಿಂದಾಗಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿವೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಆರೋಗ್ಯ ಉಚಿತ ತಪಾಸಣಾ ಶಿಬಿರ ಸಹಕಾರಿಯಾಗಿವೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಸ್. ಸತೀಶ್ ತಿಳಿಸಿದರು.

ತಾಲ್ಲೂಕಿನ ಧರ್ಮಪುರಿ ಗ್ರಾಮದಲ್ಲಿ ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ನಡೆದ ವಿಶೇಷ ವಾರ್ಷಿಕ ಶಿಬಿರದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಮತ್ತು ಆರೋಗ್ಯ ಜಾಗೃತಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.




ಬದಲಾದ ಜೀವನ ಶೈಲಿಯಿಂದ ಮಕ್ಕಳಲ್ಲಿ ರಕ್ತದೊತ್ತಡ, ಮಧುಮೇಹ ಮೊದಲಾದ ಖಾಯಿಲೆಗಳು ಕಾಣಿಸಿಕೊಳ್ಳುತ್ತಿರುವುದು ಆತಂಕದ ವಿಷಯ. ಹೀಗಾಗಿ ಕಾಲಕಾಲಕ್ಕೆ ಪರೀಕ್ಷೆಗಳಿಗೆ ಒಳಗಾಗಿ ವೈದ್ಯರ ಸಲಹೆ ಪಡೆದುಕೊಳ್ಳಬೇಕು. ಸರಿಯಾದ ಆಹಾರ ಮತ್ತು ವ್ಯಾಯಾಮ ಪದ್ಧತಿಯಿಂದ ಆರೋಗ್ಯಕರ ಜೀವನ ನಡೆಸಬಹುದು. ದೈಹಿಕ, ಮಾನಸಿಕ, ಸಾಮಾಜಿಕ ಸದೃಢತೆಯನ್ನು ಆರೋಗ್ಯವೆಂದು ಕರೆಯಲಾಗುತ್ತದೆ. ರೋಗಗಳಲ್ಲಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ಎಂಬ ರೋಗಗಳಿವೆ. ಅಸಾಂಕ್ರಾಮಿಕ ರೋಗಗಳು ಸಂಪೂರ್ಣ ವಾಸಿಯಾಗುವುದಿಲ್ಲ. ಅವುಗಳನ್ನು ನಿಯಂತ್ರಣದಲ್ಲಿಟ್ಟುಬೇಕು ಎಂದು ಸಲಹೆ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಕ ರಾಜು, ಆರೋಗ್ಯ ನಿರೀಕ್ಷಕ ಮಂಜು, ಐಸಿಟಿಸಿ ಆಪ್ತ ಸಮಾಲೋಚಕಿ ಗೌರಿ, ಎನ್‌ಸಿಡಿ ಸಮಾಲೋಚಕ ರವಿ, ಪ್ರಯೋಗಾಲಯ ತಂತ್ರಜ್ಞರಾದ ಸುಮಿತ್ರ, ಸುಪ್ರಿಯ, ಆಶಾ ಕಾರ್ಯಕರ್ತರಾದ ನೇತ್ರಾವತಿ, ಪ್ರಾಧ್ಯಾಪಕ ಟಿ.ಕೆ ಶ್ರೀನಿವಾಸ, ಶಿಬಿರಾಧಿಕಾರಿ ಡಾ.ಪಿ.ಕೆ ರಾಘವೇಂದ್ರ, ಉಪನ್ಯಾಸಕರಾದ ರಶ್ಮಿತ, ಭವ್ಯ, ಕಾಲೇಜು ಸಿಬ್ಬಂದಿ, ಧರ್ಮಪುರಿ ಗ್ರಾಮಸ್ಥರು ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರರು ಉಪಸ್ಥಿತರಿದ್ದರು.

## ಖರೀದಿ ನೆಪದಲ್ಲಿ ಬಂದು ಚಿನ್ನ ಕದ್ದ ಕಿಡಿಗೇಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಚಿನ್ನಾಭರಣ ಖರೀದಿ ನೆಪದಲ್ಲಿ ಜ್ಯುವೆಲ್ಲರಿ ಶಾಪ್‌ಗೆ ಬಂದ ಕಿಡಿಗೇಡಿ ಮಾಲೀಕರ ಗಮನ ಬೇರೆಡೆ ಸೆಳೆದು 1.90 ಲಕ್ಷ ರೂ. ಮೌಲ್ಯದ 12 ಗ್ರಾಂ ತೂಕದ ಚಿನ್ನದ ಸರ ಕಳವು ಮಾಡಿರುವ ಘಟನೆ ಪಟ್ಟಣದ ಗಾಣಿಗರ ಬೀದಿಯಲ್ಲಿರುವ ಕನ್ನಿಕಾ ಜ್ಯುವೆಲ್ಲರಿ ಅಂಗಡಿಯಲ್ಲಿ ನಡೆದಿದೆ.

ಅಂಗಡಿ ಮಾಲೀಕ ಅಮೃತ್ ಅವರು ಇದ್ದಾಗ ಮಾಸ್ಕ್ ಧರಿಸಿ ಬಂದ ಅಪರಿಚಿತ ತಾಳಿ ಗುಂಡು ಹಾಗೂ ಚಿನ್ನದ ಸರ ತೋರಿಸಿ ಎಂದು ಕೇಳಿದ್ದಾನೆ. ನಂತರ ಉಂಗುರ ತೋರಿಸುವಂತೆ ಕೇಳಿದ್ದಾನೆ. ಅಂಗಡಿ ಮಾಲೀಕ ಉಂಗುರ ತೋರಿಸಲು ಬೇರೆ ಕಡೆ ತಿರುಗುತ್ತಿದ್ದಂತೆ ಟೇಬಲ್ ಮೇಲೆ ಇಟ್ಟಿದ್ದ ಚಿನ್ನದ ಸರವನ್ನು ಜೇಬಿಗೆ ಹಾಕಿಕೊಂಡು ಪರಾರಿಯಾಗಿದ್ದಾನೆ.

ಕಳವಾಗಿರುವ ಸರವು ಸುಮಾರು 12 ಗ್ರಾಂ ತೂಕ ಹೊಂದಿದ್ದು, ಅದರ ಮೌಲ್ಯ ಸುಮಾರು 1.90 ಲಕ್ಷ ರೂ. ಎಂದು ಅಮೃತ್ ಅವರು ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮರಾದಲ್ಲಿ ಕಳ್ಳನ ಕರಾಮತ್ತು ಸೆರೆಯಾಗಿದ್ದು, ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248